Reg. No. | | | | | | | | | |

**BBAKAL 104**

**Credit Based I Semester B.B.A. Examination, October/November 2017**
**(New Scheme)**
**(2017-18 Batch Onwards)**
**KANNADA**
**Kannada Language Paper – I**

Time : 3 Hours Max. Marks : 80

I. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ : **(3×8=24)**

1) ತಾಯಿ ಹಾಗೂ ತವರಿನ ಬಗ್ಗೆ ಜನಪದರ ಅಭಿಮಾನ, ಅನುಭವಗಳು 'ಹಡೆದವ್ವ' ಪದ್ಯಭಾಗದಲ್ಲಿ ಹೇಗೆ ವ್ಯಕ್ತವಾಗಿವೆ ? ವಿವರಿಸಿ.

**ಅಥವಾ**

ಅನ್ನದ ಮಹತ್ವ 'ಅಕ್ಕಿ ಆರಿಸುವಾಗ' ಕವಿತೆಯಲ್ಲಿ ಹೇಗೆ ವ್ಯಕ್ತವಾಗಿದೆ ? ವಿವರಿಸಿ.

2) ಗ್ರಾಮೀಣ ಕೃಷಿ ಸಂಸ್ಕೃತಿಯ ಸೊಬಗು, ದುಃಖ-ದುಮ್ಮಾನಗಳು 'ನೆಲಕುಸಿಯೆ ಪದವಿಹುದು' ಕಥೆಯಲ್ಲಿ ಹೇಗೆ ವ್ಯಕ್ತವಾಗಿದೆ ? ವಿವರಿಸಿ.

**ಅಥವಾ**

ಏಕಾಂತ ಹಾಗೂ ಮೌನದ ಅಗತ್ಯ 'ಮನಸ್ಸಿನ ಒಳಗೊಂದು ಮನೆಯ ಮಾಡಿ' ಪ್ರಬಂಧದಲ್ಲಿ ಹೇಗೆ ಅನಾವರಣಗೊಂಡಿದೆ ? ವಿವರಿಸಿ.

3) ನವ ಮಾಧ್ಯಮಗಳ ಸಾಧಕ-ಬಾಧಕಗಳನ್ನು ವಿವರಿಸಿ.

**ಅಥವಾ**

ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಕನ್ನಡವನ್ನು ಬಳಸುವ ರೀತಿ ಹಾಗೂ ಅದರ ವೈಶಿಷ್ಟ್ಯಗಳೇನು ?

II. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ : **(3×5=15)**

1) ಭಕ್ತ ಹಾಗೂ ಭಗವಂತರ ನಡುವಿನ ಸಂಬಂಧವನ್ನು ಹಡಪದ ಅಪ್ಪಣ್ಣ ಹೇಗೆ ವಿವರಿಸಿದ್ದಾನೆ ?

**ಅಥವಾ**

ನಾಡಿನ ಜನರಲ್ಲಿನ ಹಿಂಸಾಚಾರದ ಬಗೆಗಿನ ವಿಷಾದ 'ಪಂಚ ನದಿಗಳ ಹಾಡು' ಕವನದಲ್ಲಿ ಹೇಗೆ ವ್ಯಕ್ತವಾಗಿದೆ ?

ಪು.ತಿ.ನೋ.

2) 'ದೇವರು ಮತ್ತು ಅಪಘಾತ' ಕಥೆಯ ಆಶಯವೇನು ?

**ಅಥವಾ**

'ಮನಸ್ಸಿನ ಒಳಗೊಂದು ಮನೆಯ ಮಾಡಿ' ಪ್ರಬಂಧದ ಆಶಯವೇನು ?

3) ಅಲ್ಪವಿರಾಮ, ಅರ್ಧ ವಿರಾಮ ಹಾಗೂ ವಿವರಣ ವಿರಾಮಗಳನ್ನು ಪರಿಚಯಿಸಿ.

**ಅಥವಾ**

'ಅರ್ಥಪೂರ್ಣ ವಾಕ್ಯರಚನೆ' ಎಂದರೇನು ? ಉದಾಹರಣೆಗಳ ಸಹಿತ ವಿವರಿಸಿ.

III. ಈ ಕೆಳನವುಗಳಲ್ಲಿ **ಒಂದರ** ಸಂದರ್ಭ ಸೂಚಿಸಿ ಭಾವಾರ್ಥ ವಿವರಿಸಿರಿ : **(1×5=5)**

1) ಆಯುಧ ಮಾರಿದ್ದರೇನು ?
ರಣರಂಗದಲ್ಲಿ ಹಗೆಯ ಗೆಲುವುದು ಒಂದೇ ಅಲಗು.
ಏನನೋದಿ ಏನ ಕೇಳಿದರೇನ,
ತಾನಾರೆಂಬುದನರಿಯದನ್ನಕ್ಕ ?
ತಾನಾರೆಂಬುದನರಿದ ಬಳಿಕ ನೀನಾರೆಂಬುದಿಲ್ಲ
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನು
ತಾನೆಯಾಗಿಹನು.

2) ತನ್ನಂಗ ನೋಡಿದರ ಭಿನ್ನಿಲ್ಲ ಭೇದಿಲ್ಲ
ತನ್ನಂಗ ತನ್ನ ಮಗಳಂಗ ನೋಡಿದರ
ಕಣ್ಣ ಮುಂದೈತೆ ಕೈಲಾಸ.

IV. ಯಾವುದಾದರೂ **ಎರಡು** ಸಾಲುಗಳಿಗೆ ಸಂದರ್ಭ ಸ್ವಾರಸ್ಯ ವಿವರಿಸಿರಿ : **(2×4=8)**

1) ಬಂದದ್ದು ಬರಲವ್ವ , ಎದಿಗೊಟ್ಟು ನಿಲಬೇಕ
2) ಗಾರುಡವ ತಿಳಿದಡೆ ಹಾವಿನ ಸಂಗವೇ ಲೇಸು
3) ಮನೆಮನದ ಒಳಗೆಲ್ಲ ದಟ್ಟಹೊಗೆ ನಿಟ್ಟುಸಿರು
4) ಮೆಟ್ಟಿಹಲಗೆಯ ಹಾರುವವನನು ನೆಟ್ಟದಿಟ್ಟಿಯಲಿ ನೋಳ್ಪರು.

V. ಅ) ಯಾವುದಾದರೂ **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ : **(2×4=8)**

1) ಮೋಳಿಗೆ ಮಾರಯ್ಯ
2) ಸಿದ್ಧಲಿಂಗಯ್ಯ
3) ವಚನ ಸಾಹಿತ್ಯ
4) ತುಳು ಭಾಷೆ

ಆ) ಯಾವುದಾದರೂ **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ : **(2x4=8)**

1) ಬರಗೂರು ರಾಮಚಂದ್ರಪ್ಪ
2) ಬಾನು ಮುಸ್ತಾಕ್
3) ಪಿಟಾರಿ
4) ಯಂತ್ರಯುಗದ ದುಷ್ಪರಿಣಾಮ.

VI. ಒಂದು ವಾಕ್ಯದಲ್ಲಿ ಉತ್ತರಿಸಿ : **(12x1=12)**

1) ದೇ. ಜವರೇಗೌಡರು ಸಂಪಾದಿಸಿರುವ ಜಾನಪದ ಸಾಹಿತ್ಯ ಕೃತಿಯ ಹೆಸರೇನು ?
2) ಹಡಪದ ಅಪ್ಪಣ್ಣನ ವಚನಗಳ ಅಂಕಿತ ಯಾವುದು ?
3) ಸಿದ್ಧಲಿಂಗಯ್ಯನವರ ಆತ್ಮಕಥನದ ಹೆಸರೇನು ?
4) 'ಅಲಕ ತೀರ್ಥಹಳ್ಳಿ' ಯವರ ಮೂಲ ಹೆಸರೇನು ?
5) 'ನನಗೂ ವಿಶ್ರಾಂತಿ ಬೇಕು' ಎಂಬ ಕಥೆಯ ಮೂಲ ಲೇಖಕರು ಯಾರು ?
6) ಪ್ರಸನ್ನ ಅವರ ಪ್ರಬಂಧದ ಹೆಸರೇನು ?
7) ತುಳು ಭಾಷೆಯನ್ನು 'ದ್ರಾವಿಡ ಭಾಷೆಗಳಲ್ಲಿಯೇ ಪ್ರೌಢಭಾಷೆ' ಎಂದು ಗುರುತಿಸಿದ ವಿದ್ವಾಂಸರು ಯಾರು ?
8) ಜೋಗಿಯವರ ಮೂಲ ಹೆಸರೇನು ?
9) ಆಧುನಿಕ ಮುದ್ರಣ ಮಾಧ್ಯಮ ಯಾವ ಶತಮಾನದಲ್ಲಿ ಹುಟ್ಟಿಕೊಂಡಿತು ?
10) ಫೇಸ್‌ಬುಕ್‌ನ ಮೂಲ ಪರಿಕಲ್ಪನೆ ಯಾವುದು ?
11) ಕನ್ನಡದ ಮೊದಲ ಅಂತರ್ಜಾಲ ಪತ್ರಿಕೆ ಯಾವುದು ?
12) ಕನ್ನಡದ ಯಾವುದಾದರೊಂದು ತಂತ್ರಾಂಶವನ್ನು ಹೆಸರಿಸಿರಿ.